# ಅದ್ವಿತೀಯರು

**ಹರಿಹರಪುರ ಬಿ. ಸುಬ್ರಹ್ಮಣ್ಯ**

ಪುರಾ ಕವೀನಾಂ ಗಣನಾಪ್ರಸಂಗೇ ಕನಿಷ್ಠಿಕಾಧಿಷ್ಠಿತಕಾಳಿದಾಸಾ ॥
ಅದ್ಯಾಪಿ ತತ್ತುಲ್ಯಕವೇರಭಾವಾತ್ ಅನಾಮಿಕಾ ಸಾರ್ಥವತೀ ಬಭೂವ ॥

ನಮ್ಮ ಕೈಯ್ಯಲ್ಲಿರುವ ಐದು ಬೆರಳುಗಳಿಗೆ ಸಂಸ್ಕೃತದಲ್ಲಿ ಕ್ರಮವಾಗಿ ಅಂಗುಷ್ಠಿಕಾ–ತರ್ಜನೀ–ಮಧ್ಯಮಾ–ಅನಾಮಿಕಾ ಮತ್ತು ಕನಿಷ್ಠಿಕಾ ಎಂಬ ಹೆಸರುಗಳಿವೆ. ಮಂತ್ರ ಜಪಾಂಗವಾದ ಕರನ್ಯಾಸದಲ್ಲಿ ಮೊದಲ ಪ್ರಾಶಸ್ತ್ಯ ಅಂಗುಷ್ಠಿಕಾ–ಅಂದರೆ ಹೆಬ್ಬೆರಳಿಗೆ. ಆದರೆ ಏನನ್ನಾದರೂ ಲೆಕ್ಕ ಮಾಡುವಾಗ ಮಾತ್ರ ಕನಿಷ್ಠಿಕಾ–ಅಂದರೆ ಕಿರುಬೆರಳಿನಿಂದಲೇ ಪ್ರಾರಂಭಿಸುವುದು ರೂಢಿ. ಕಿರುಬೆರಳಿನ ನಂತರದ ಬೆರಳಿಗೆ ಸಂಸ್ಕೃತದಲ್ಲಿರುವ "ಅನಾಮಿಕಾ" ಅಂದರೆ "ಹೆಸರಿಲ್ಲದ್ದು" ಎಂಬ ಹೆಸರು ಹೇಗೆ ಅರ್ಥಪೂರ್ಣವೆಂಬುದನ್ನು ಮೇಲಿನ ಶ್ಲೋಕ ಸ್ವಾರಸ್ಯವಾಗಿ ಪ್ರತಿಬಿಂಬಿಸುತ್ತದೆ.

"ಹಿಂದೊಮ್ಮೆ ಶ್ರೇಷ್ಠ ಕವಿಗಳ ಹೆಸರುಗಳನ್ನು ಪಟ್ಟಿ ಮಾಡುವ ವಿಷಯ ಪಂಡಿತ ಮಂಡಲಿಯಲ್ಲಿ ಪ್ರಸ್ತಾಪಕ್ಕೆ ಬಂದಿತು. ಸರಿ ! ಮಹಾಕವಿ ಕಾಳಿದಾಸನ ಹೆಸರನ್ನು ಪ್ರಾರಂಭಿಸಿ ವಾಡಿಕೆಯಂತೆ ಕಿರುಬೆರಳನ್ನು ಮಡಿಚಲಾಯಿತು. ಮುಂದಿನ ಸರದಿ ಕಿರುಬೆರಳಿನ ಪಕ್ಕದ ಬೆರಳಿನದು. ಆದರೆ ಎಷ್ಟೇ ಪ್ರಯತ್ನಿಸಿದರೂ ಕಾಳಿದಾಸನಿಗೆ ಎರಡನೆಯ ಸ್ಥಾನದಲ್ಲಿ ನಿಲ್ಲಬಲ್ಲ ಕವಿಯ ಹೆಸರೇ ದೊರೆಯಲಿಲ್ಲ. ಇಂದಿಗೂ ಅದು ಹಾಗೆಯೇ ಉಳಿದುದರಿಂದ ಆ ಬೆರಳಿಗೆ 'ಅನಾಮಿಕಾ' (ಹೆಸರಿಲ್ಲದ್ದು) ಎಂಬ ಹೆಸರೇ ಶಾಶ್ವತವಾಗಿಬಿಟ್ಟಿದೆ."

ಸಂಸ್ಕೃತ ಕವಿತಾ ಸಾಮ್ರಾಜ್ಯದಲ್ಲಿ ಕಾಳಿದಾಸನನ್ನು ಬಿಟ್ಟರೆ ಅಂತಹ ಪರಿಗಣನೆಗೆ ಬರಬಲ್ಲ ಕವಿ ಯಾರೂ ಇಲ್ಲವೆಂಬುದನ್ನು ನಿರೂಪಿಸುವ ಈ ಪ್ರಸಂಗ ನಿಜವಾಗಿ ನಡೆಯಿತೋ ? ಅಥವಾ ಇದೊಂದು ಕವಿಚಮತ್ಕಾರವೋ ? ಹೇಗೊ ಇರಲಿ !

ಈಗಿನ ದಿನಗಳಲ್ಲಿ **ವಿದ್ವಾನ್ ರಂಗನಾಥ ಶರ್ಮಾ** ಅವರು **ಅದ್ವಿತೀಯರೆಂಬ** ಹೆಗ್ಗಳಿಕೆಗೆ ಪಾತ್ರರಾಗಿರುವುದನ್ನು ನಿರೂಪಿಸಲು ಪೀಠಿಕೆಯಾಗಿ ಈ ಮೇಲಿನ ಪ್ರಸಂಗ.

ಈ ಶತಮಾನದ ಮೊದಲ ದಶಕಗಳಲ್ಲಿ ಜನಿಸಿ ಇದೀಗ ಮುಕ್ಕಾಲು ಶತಮಾನ ದಾಟಿ ಮುಂದುವರಿಯುತ್ತಿರುವ—ವಿದ್ವಾನ್ ಉಪಾಧಿಗೆ ಸಾರ್ಥಕತೆ ತಂದುಕೊಟ್ಟ— ಹಿರಿಯರು ಅಲ್ಲಿ-ಇಲ್ಲಿ ಅಪರೂಪಕ್ಕೆ ಕಾಣಸಿಗುತ್ತಾರೆ. ಬಹು ವಿಷಯಗಳಲ್ಲಿ ಆಳವಾದ ಅಧ್ಯಯನ ನಡೆಸಿ ಸಂಪಾದಿಸಿಕೊಂಡ ತಿಳಿವಳಿಕೆ-ನಿರ್ದುಷ್ಟ ವೈದುಷ್ಯಗಳೆಂಬ ರತ್ನಗಳಿಗೆ ಚಿನ್ನದ ಕುಂದಣವಿಟ್ಟಂತೆ ಸರಳತನ-ಸೌಹಾರ್ದಭಾವ-ಸೌಜನ್ಯಗಳಿಂದ ಇಂಥವರ ವ್ಯಕ್ತಿತ್ವ ಪ್ರಭಾವಿತವಾಗಿದೆ. ಪುರಾತನ ಉತ್ತಮ ಮೌಲ್ಯಗಳ ಸಮರ್ಥ ಪ್ರತಿಪಾದಕರಾದ ಇವರು ನವಯುಗದ ವಾಸ್ತವ ಪ್ರಜ್ಞೆ-ವೈಚಾರಿಕತೆಗಳನ್ನೂ ಮೈಗೂಡಿಸಿಕೊಂಡು ಈ ಎರಡರ ನಡುವಣ ಕೊಂಡಿಯಂತೆ ಇದ್ದಾರೆ. ಇನ್ನೂ ಅಷ್ಟಿಷ್ಟು ಹಿಡಿದುಕೊಂಡಿರುವ ಈ ಕೊಂಡಿ ಕಳಚಿತೆಂದರೆ ಆಗ ಈ "ಪ್ರಗಲ್ಭ ಪಾಂಡಿತ್ಯ" ಎಂಬ ಮಾತು ಬಹುಶಃ ಇತಿಹಾಸವಾಗಿಬಿಡಬಹುದು.

ಇದೀಗ 77ನೇ ವಯಸ್ಸಿನಲ್ಲಿರುವ ವಿದ್ವಾನ್ ರಂಗನಾಥ ಶರ್ಮರು ಇಂತಹ ಶ್ರೇಷ್ಠ ಪಂಡಿತರಲ್ಲಿ ಒಬ್ಬರು. ಇವರು **'ಅದ್ವಿತೀಯರು'** ಎಂದು ನಾಡಿನ ಹಿರಿಯ ಹೆಸರಾಂತ ಸಾಹಿತಿಗಳಿಂದ ಪರಿಗಣಿಸಲ್ಪಟ್ಟ ಎರಡು ಪ್ರಸಂಗಗಳು ಈ ಮುಂದೆ ಕಂಡಂತೆ ಇವೆ :

**ಮೊದಲನೆಯದು :**

ಬೆಂಗಳೂರು ನಗರದ ನರಸಿಂಹರಾಜ ಕಾಲೋನಿ ಶ್ರೀ ರಾಮ ಮಂದಿರದ ಸಂಬಂಧವುಳ್ಳದ್ದು. ಈ ಸಂಸ್ಥೆಯ ಕಾರ್ಯ ನಿರ್ವಹಣೆ-ಚಟುವಟಿಕೆ-ಸಾಧನೆಗಳ ವಿಷಯ ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇದೆ. ಈ ರಾಮ ಮಂದಿರದ ವ್ಯವಸ್ಥಾಪಕರಾದ ನರಸಿಂಹರಾಜಾ ಕಾಲೋನಿ ಅಸೋಸಿಯೇಷನ್‌ನವರು ಶ್ರೀ ರಾಮ ವಸಂತ ನವರಾತ್ರಿ ಉತ್ಸವವನ್ನು ಪ್ರಾರಂಭಿಸಿದ್ದು 1939ರಲ್ಲಿ. ಅಲ್ಲಿಂದ ಪ್ರತಿವರ್ಷ ಉತ್ಸವವನ್ನು ವೈವಿಧ್ಯಪೂರ್ಣವಾಗಿ ನಡೆಸುತ್ತ 25 ವರ್ಷ ತುಂಬಿದಾಗ ಅದರ ಬೆಳ್ಳಿ ಹಬ್ಬದ ಸಮಾರಂಭವನ್ನು ದೊಡ್ಡ ಪ್ರಮಾಣದಲ್ಲಿ ನೆರವೇರಿಸಿದರು. ಆ ಮಹೋತ್ಸವಕ್ಕಾಗಿ ಸಂಗ್ರಹಿಸಿದ ಹಣದಲ್ಲಿ ವೆಚ್ಚಗಳು ಕಳೆದು ನಾಲ್ಕು ಸಹಸ್ರ ರೂಪಾಯಿ ಗಳು ಉಳಿದವು. ರೂಪಾಯಿ ಈಗಿನಷ್ಟು ಅಪಮೌಲ್ಯಗೊಂಡಿರದ 1964ರ ಆ ದಿನ ಗಳಲ್ಲಿ ಇದು ಒಂದು ಉತ್ತಮ ಮೊತ್ತವೇ ಆಗಿತ್ತು. ಈ ಹಣವನ್ನು ಉಪಯುಕ್ತ ರೀತಿಯಲ್ಲಿ ವಿನಿಯೋಗಿಸಬೇಕೆಂಬುದು ಅಸೋಸಿಯೇಷನ್‌ನವರ ಆಸೆ. **ಪೂಜ್ಯ ಡಿ.ವಿ.ಜಿ.ಯವರು** ಈ ಸಂಸ್ಥೆಯ ಚಟುವಟಿಕೆಗಳನ್ನು ಆಸಕ್ತಿಯಿಂದ ಗಮನಿಸಿ

ಪ್ರೋತ್ಸಾಹಿಸುತ್ತಿದ್ದರು. ಅಸೋಸಿಯೇಷನ್‌ನವರು ಈ ಹಣದ ವಿನಿಯೋಗದ ವಿಷಯವನ್ನು ಹಿರಿಯರಾದ ಡಿ.ವಿ.ಜಿ.ಯವರ ನಿರ್ಧಾರಕ್ಕೆ ಬಿಡುವುದು ಒಳ್ಳೆಯದು ಎಂಬ ತೀರ್ಮಾನಕ್ಕೆ ಬಂದರು.

ಅಸೋಸಿಯೇಷನ್ನಿನ ಆಗಿನ ಅಧ್ಯಕ್ಷ ಶ್ರೀ ಹೆಚ್. ಎಸ್. ಕೆ. ಸ್ವಾಮಿ, ಉಪಾಧ್ಯಕ್ಷ ಶ್ರೀ ಡಿ. ಸಿ. ಅನಂತರಾಮಯ್ಯ ಮತ್ತು ಕಾರ್ಯದರ್ಶಿ ಶ್ರೀ ಎಸ್. ಎನ್. ಮೂರ್ತಿಯವರು ಪೂಜ್ಯ ಡಿ.ವಿ.ಜಿ.ಯವರನ್ನು ಭೇಟಿ ಮಾಡಿ ವಿಷಯವನ್ನು ವಿವರಿಸಿದರು. ಆಗ ಡಿ.ವಿ.ಜಿಯವರು "ಶ್ರೀ ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸಲು ಈ ಧನವನ್ನು ವಿನಿಯೋಗಿಸಿಕೊಂಡು ಕೆಲಸ ಪ್ರಾರಂಭಿಸಿರಿ. ಕಾರ್ಯ ಯಶಸ್ವಿಯಾಗಿ ಪೂರ್ಣಗೊಳ್ಳುತ್ತದೆ. ಇದು ಅಗತ್ಯವಾಗಿ ಆಗಬೇಕಾದ ಕೆಲಸ. ನಮ್ಮ ಸಂಸ್ಕೃತಿಯ ಜೀವಾಳದಂತಿರುವ ಈ ಕಾವ್ಯದ ಪರಿಚಯ ಸಾಮಾನ್ಯ ಜನರಿಗೂ ಲಭ್ಯವಾಗುವುದರ ಜೊತೆಗೆ ಸಂಸ್ಥೆಯ ನೆನಪು ಚಿರಕಾಲ ಉಳಿಯುತ್ತದೆ" ಎಂದು ಸೂಚಿಸಿದರು. ಸಲಹೆಯೇನೋ ಅತ್ಯುತ್ತಮವಾದದ್ದೇ! ಆದರೆ ಅದನ್ನು ಕಾರ್ಯಗತಗೊಳಿಸಲು ಮೊಟ್ಟ ಮೊದಲು ಇದಿರಾಗುವ ಸಮಸ್ಯೆ: ಸಮರ್ಥ ಅನುವಾದಕರನ್ನು ಹೊಂದಿಸಿಕೊಳ್ಳುವುದು. ಅಸೋಸಿಯೇಷನ್‌ನವರು ಇದನ್ನೇ ಡಿ.ವಿ.ಜಿ.ಯವರ ಮುಂದೆ ಇಟ್ಟಾಗ ಅವರು "ಇದೊಂದು ಸಮಸ್ಯೆಯೇ ಅಲ್ಲ. ವಿದ್ವಾನ್ ರಂಗನಾಥ ಶರ್ಮರಿಗೆ ಈ ಕಾರ್ಯವನ್ನು ವಹಿಸಿದರೆ ಅತ್ಯಂತ ಸಮರ್ಪಕವಾದ ಅನುವಾದ ಹೊರಬರುತ್ತದೆ. ಕನ್ನಡ ನಾಡಿನಲ್ಲಿ ಇಂತಹ ಮಹತ್ಕಾರ್ಯವನ್ನು ನಿರ್ವಹಿಸಬಲ್ಲ **ಏಕೈಕ ವ್ಯಕ್ತಿ ರಂಗನಾಥಶರ್ಮರು** ಎಂದರು.

ಪೂಜ್ಯ ಡಿ.ವಿ.ಜಿ.ಯವರ ಸಲಹೆಯಂತೆ 1964ರಲ್ಲಿಯೇ ಶ್ರೀಮದ್ರಾಮಾಯಣದ ಸುಂದರ ಕಾಂಡವು ಶ್ರೀ ರಂಗನಾಥ ಶರ್ಮರಿಂದ ಅನುವಾದಿಸಲ್ಪಟ್ಟು ಸಮಿತಿಯವರು ಅದನ್ನು ಮುದ್ರಣ ಮಾಡಿಸಿ ಪ್ರಕಟಿಸಿದರು. ಪೂಜ್ಯ ಡಿ.ವಿ.ಜಿ.ಯವರ ವಿದ್ವತ್ಪೂರ್ಣ ಮುನ್ನುಡಿಯನ್ನೊಳಗೊಂಡ ಈ ಪುಸ್ತಕಕ್ಕೆ ಕನ್ನಡಿಗರಿಂದ ದೊರೆತ ಪ್ರೋತ್ಸಾಹ-ಆಸಕ್ತಿಗಳಿಂದಾಗಿ ಸಮಿತಿಯವರು ರಾಮಾಯಣದ ಉಳಿದ ಕಾಂಡಗಳನ್ನೂ ಶ್ರೀ ರಂಗನಾಥ ಶರ್ಮರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸಿದರು.

ಹೀಗೆ ಸಂಸ್ಕೃತದ ಬೃಹತ್ಕಾವ್ಯಕಥಾನಕವೆನಿಸಿದ ಸಮಗ್ರ ವಾಲ್ಮೀಕಿ ರಾಮಾಯಣವು ಕನ್ನಡದ ಆಸಕ್ತ ಓದುಗರಿಗೆ ಲಭ್ಯವಾಯಿತು. ಪ್ರತಿಯೊಂದು ಕಾಂಡಕ್ಕೂ ಡಿ.ವಿ.ಜಿ.ಯವರ ವಿಶ್ಲೇಷಣಾತ್ಮಕ ಮುನ್ನುಡಿ, ಕನ್ನಡ ಲಿಪಿಯಲ್ಲಿ ಸಂಸ್ಕೃತದ ಮೂಲ ಶ್ಲೋಕಗಳು, ಶ್ರೀರಂಗನಾಥಶರ್ಮರ ತಿಳಿಗನ್ನಡದ ಸೊಗಸಾದ ಅನುವಾದ-ಒಳ್ಳೆಯ ಮುದ್ರಣಗಳಿಂದ ಆಕರ್ಷಕವಾದ ಈ ರಾಮಾಯಣದ ಸಂಪುಟವು ಇದುವರೆಗೆ 5 ಮುದ್ರಣಗಳನ್ನು ಕಂಡಿರುವುದೇ ಅದರ ಜನಪ್ರಿಯತೆಗೆ ಸಾಕ್ಷಿ. ಪೂಜ್ಯ ಡಿ.ವಿ.ಜಿ. ಯವರು ಮೊಟ್ಟ ಮೊದಲು ಈ ಅನುವಾದ ಕಾರ್ಯ ಮತ್ತು ಶ್ರೀ ರಂಗನಾಥಶರ್ಮರ

ಬಗ್ಗೆ ಹೇಳಿದ್ದ ಮಾತುಗಳು ನಿಜವಾಗಿಯೂ ಋಷಿವಾಣಿಗಳಂತೆ ಪರಿಣಮಿಸಿರುವುದು ಗಮನಾರ್ಹ.

1964ರಲ್ಲಿ ಸುಂದರಕಾಂಡದ ಅನುವಾದದಿಂದ ಪ್ರಾರಂಭವಾದ ಈ ಮಹತ್ಕಾರ್ಯವನ್ನು ಶ್ರೀ ಶರ್ಮರು 1974ರಲ್ಲಿ ಉತ್ತರಕಾಂಡದ ಅನುವಾದದೊಂದಿಗೆ ಪೂರ್ಣಗೊಳಿಸಿದರು. ಇದೇ ಸಂದರ್ಭದಲ್ಲಿ ಶ್ರೀರಂಗನಾಥಶರ್ಮರ ಜೀವನ ಸಂಗಾತಿಯಾಗಿ-10 ವರ್ಷಕಾಲ-ಈ ಅನುವಾದ ಕಾರ್ಯದಲ್ಲಿ ಸಹಕಾರ ನೀಡುತ್ತ ಬಂದ ಸಹದರ್ಮಿಣಿಯ ವಿಯೋಗ ಅವರಿಗೆ ಉಂಟಾಯಿತು. ಆದರೆ 10 ವರ್ಷ ಎಡೆಬಿಡದೆ ಶ್ರೀರಾಮಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀ ಶರ್ಮರು ಕೆಲಸ ಮುಗಿಯುತ್ತಿದ್ದಂತೆಯೇ ಒದಗಿ ಬಂದ ಈ ವ್ಯಸನವನ್ನು ಶ್ರೀರಾಮನಂತೆ ಸ್ಥಿತ ಪ್ರಜ್ಞರಾಗಿಯೇ ಸಹಿಸಿಕೊಂಡಿರಬೇಕು.

ಮುಂದೆ 1977ರಲ್ಲಿ ಇದೇ ಸಮಿತಿಯವರು ಶ್ರೀ ರಂಗನಾಥಶರ್ಮರಿಂದ ಶ್ರೀಭಾಗವತದ 10 (2 ಭಾಗ) 11 ಮತ್ತು 12ನೇ ಸ್ಕಂಧಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸಿದ್ದಾರೆ. ಶ್ರೀಯುತರು ರಚಿಸಿದ ಶ್ರೀರಾಮ ಕರ್ಣಾಮೃತ ಮತ್ತು ಕೆಲವು ಚಿಕ್ಕ ಪುಸ್ತಕಗಳನ್ನೂ ಸಮಿತಿ ಪ್ರಕಟಿಸಿದೆ. 1988ರಲ್ಲಿ ಶ್ರೀ ಶರ್ಮರು ಶ್ರೀ ವಿಷ್ಣು ಪುರಾಣವನ್ನು ಕನ್ನಡಕ್ಕೆ ಅನುವಾದಿಸಿದ್ದು (2 ಭಾಗ) ಶ್ರೀ ರಾಮಕೃಷ್ಣ ಮಠ (ಆಶ್ರಮ)ದಿಂದ ಪ್ರಕಟವಾಗಿದೆ.

(ಮೇಲೆ ಕಂಡ ವಿಷಯಕ್ಕೆ ಅಂಕಿ-ಅಂಶ ಒದಗಿಸಿದವರು ನ.ರಾ. ಕಾಲೋನಿ ಅಸೋಸಿಯೇಷನ್ ಕಾರ್ಯದರ್ಶಿ ಶ್ರೀ ಎಸ್. ಎನ್. ಮೂರ್ತಿಯವರು.)

**ಎರಡನೆಯದು :**

ಇದು ಈ ಲೇಖಕನ ಸಂಬಂಧವುಳ್ಳದ್ದು. ಇದೇ ಶತಮಾನದ ಪೂರ್ವಾರ್ಧದಲ್ಲಿ ಪ್ರಸಿದ್ಧಿ ಪಡೆದಿದ್ದ **ಶ್ರೀ ವಾಸಿಷ್ಠ ಗಣಪತಿ ಮುನಿಗಳ** (ಕಾವ್ಯಕಂಠ ಗಣಪತಿಶಾಸ್ತ್ರಿ ಎಂಬುದಾಗಿಯೂ ಕರೆಯಲ್ಪಡುತ್ತಿದ್ದ ಇವರು ಭಗವಾನ್ ರಮಣ ಮಹರ್ಷಿಗಳ ಶಿಷ್ಯರು) ಬದುಕು-ಬರಹಗಳನ್ನು ಚಿತ್ರಿಸುವ **'ವಾಸಿಷ್ಠ ವೈಭವಂ'** ಸಂಸ್ಕೃತ ಚಂಪೂ ಕಾವ್ಯವು **ದಿ|| ವೇ.ಬ್ರಂ.ಶ್ರೀ. ಕಪಾಲಿಶಾಸ್ತ್ರಿಗಳವರ** ರಚನೆ. ಇದನ್ನು ನಾನು ಕನ್ನಡಕ್ಕೆ ಅನುವಾದಿಸಿದ್ದೇನೆ. ನನ್ನ ಆತ್ಮೀಯರಾಗಿರುವ ಸೂರಳಿ ನರಸಿಹ್ಮಮೂರ್ತಿ ಎಂಬವರ ನೆರವಿನಿಂದ ಇದು ಇತ್ತೀಚೆಗೆ ಮುದ್ರಣ ಕಂಡು ಪ್ರಕಟವಾಗಿದೆ. ಈ ಕನ್ನಡ ಅನುವಾದಕ್ಕೆ ಹಿರಿಯ ಸಾಹಿತಿಯೊಬ್ಬರ ಸೂಕ್ತ ಮುನ್ನುಡಿಯನ್ನು ಪಡೆದು ಪ್ರಕಟಿಸಬೇಕೆಂಬುದು ನಮ್ಮ ಆಸೆ. ಈ ಪುಸ್ತಕದ ಪ್ರಕಾಶಕರಿಗೆ ಪರಿಚಿತರಾದ ಹಿರಿಯ ಕವಿ-ಸಾಹಿತಿ ಮಾನ್ಯ **ಪು. ತಿ. ನರಸಿಂಹಾಚಾರ್ಯರನ್ನು** ಭೇಟಿಮಾಡಿ ಪುಸ್ತಕದ ಮುದ್ರಿತ ಕರಡು ಪ್ರತಿಯನ್ನು ಕೊಟ್ಟು ವಿಷಯವನ್ನು

ವಿಜ್ಞಾಪಿಸಿಕೊಂಡೆವು. ಪುಸ್ತಕವನ್ನು ತಿರುವಿ ಹಾಕುತ್ತಲೇ ಅವರು ಹೇಳಿದ ಮಾತುಗಳು ಇವು :– "ನಾನು ಸಂಸ್ಕೃತ ಸಾಹಿತ್ಯ-ಶಾಸ್ತ್ರಾದಿಗಳನ್ನು ಆಳವಾಗಿ ಅಧ್ಯಯನ ಮಾಡಿದವನಲ್ಲ. ಅದೂ ಅಲ್ಲದೆ ಈ ಅನುವಾದದ ಮೂಲ ಸಂಸ್ಕೃತ ಗ್ರಂಥದ ಪರಿಚಯವೂ ನನಗಿಲ್ಲ. ಆದ್ದರಿಂದ ಇಂತಹ ಗ್ರಂಥಕ್ಕೆ ನಾನು ಮುನ್ನುಡಿ ಬರೆದು ಕೊಡುವುದು ಸೂಕ್ತವೆನಿಸಲಾರದು. ನೀವು ಬೇರೆ ಯಾವುದೇ ರೀತಿಯ ಪುಸ್ತಕ ಬರೆದು ತಂದಿದ್ದರೂ ನಾನು ಸಂತೋಷದಿಂದ ಓದಿ ನೋಡಿ ಮುನ್ನುಡಿ ಬರೆದು ಕೊಡುತ್ತಿದ್ದೆ. ಆದರೆ ಈ ಕೆಲಸವನ್ನು ಅತ್ಯಂತ ಸಮರ್ಪಕವಾಗಿ ಮಾಡಬಲ್ಲ ವ್ಯಕ್ತಿಯೊಬ್ಬರಿದ್ದಾರೆ. ಸಂಸ್ಕೃತ ಸಾಹಿತ್ಯ-ದರ್ಶನ ಶಾಸ್ತ್ರಗಳು-ಪುರಾಣಗಳು-ಕನ್ನಡ ಸಾಹಿತ್ಯ ಮುಂತಾಗಿ ಎಲ್ಲದರಲ್ಲೂ ವಿಶೇಷ ಜ್ಞಾನ ಸಂಪಾದಿಸಿಕೊಂಡಿರುವ—**ಕರ್ನಾಟಕದಲ್ಲೇ ಅದ್ವಿತೀಯರೆನಿಸಿರುವ ವಿದ್ವಾನ್ ರಂಗನಾಥಶರ್ಮರೇ** ಅವರು. ನೀವು ಅವರನ್ನು ಕಂಡು ನನ್ನ ವಂದನೆಯನ್ನೂ ತಿಳಿಸಿ-ಈ ಪುಸ್ತಕಕ್ಕೆ ಮುನ್ನುಡಿಯನ್ನು ಅವರಿಂದ ಪಡೆದು ಪ್ರಕಟಿಸಿದರೆ ಅದು ಈ ಪುಸ್ತಕಕ್ಕೆ ಭೂಷಣವೆನಿಸುತ್ತದೆ."

ಪದ್ಮಶ್ರೀಯೂ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಗಳಿಸಿ ನಾಡಿನ ಗೌರವಾದರಗಳಿಗೆ ಪಾತ್ರರಾಗಿ, ಪು.ತಿ.ನ. ಎಂಬ ಅಚ್ಚುಮೆಚ್ಚಿನ ಹೆಸರಿನಿಂದಲೇ ಗುರುತಿಸಲ್ಪಡುವ ಈ ವಯೋವೃದ್ಧ ಸಾಹಿತಿಯ "ತಾನು ಎಲ್ಲವನೂ ತಿಳಿದವನಲ್ಲ" ಎಂಬ ನಮ್ರಭಾವ, "ಬೇರೊಬ್ಬ ವಿದ್ವಾಂಸರ ಯೋಗ್ಯತೆಯನ್ನು ಎತ್ತಿ ಹಿಡಿಯಬಲ್ಲ" ನಿಷ್ಕಲಂಕ ಹೃದಯ ವೈಶಾಲ್ಯ ಇವುಗಳನ್ನು ಬೇರೆಲ್ಲಿ ಕಾಣಲು ಸಾಧ್ಯ ?

ಪದ್ಮಶ್ರೀ ಡಾ|| ಪು.ತಿ.ನ.ರವರ ಈ ಸಲಹೆಯಿಂದ ನನಗೆ ಆದ ಲಾಭ ಬಹು ದೊಡ್ಡದು. ವಿದ್ವಾನ್ ರಂಗನಾಥಶರ್ಮರು "ವಾಸಿಷ್ಠ ಗಣಪತಿ ಮುನಿಗಳ" ಪರಮಪ್ರಿಯ ಶಿಷ್ಯರಾಗಿದ್ದ ಶಿರಸಿಯ ಖ್ಯಾತ ನ್ಯಾಯವಾದಿ ಶ್ರೀ ಡಿ. ವಿಶ್ವಾಮಿತ್ರರನ್ನು ಅನೇಕ ಬಾರಿ ಭೇಟಿ ಮಾಡಿ ವಾಸಿಷ್ಠ ಮುನಿಗಳ ಬಗ್ಗೆ ಹಲವು ವಿಷಯಗಳನ್ನು ತಿಳಿದುಕೊಂಡವರು ಮಾತ್ರವಲ್ಲ ! ವಾಸಿಷ್ಠರು ರಚಿಸಿದ "ಉಮಾ ಸಹಸ್ರಂ" ಮುಂತಾದ ಕೆಲವು ಗ್ರಂಥಗಳನ್ನೂ ವೇ|| ಕಪಾಲಿಶಾಸ್ತ್ರಿಗಳು ರಚಿಸಿದ "ವಾಸಿಷ್ಠ ವೈಭವಂ" ಸಂಸ್ಕೃತ ಚಂಪೂ ಕಾವ್ಯವನ್ನು ಅಧ್ಯಯನ ಮಾಡಿದವರು. ಹಾಗಾಗಿ ನಾನು ಕನ್ನಡಕ್ಕೆ ಅನುವಾದಿಸಿದ "ವಾಸಿಷ್ಠ ವೈಭವಂ" ಪುಸ್ತಕವು ಶ್ರೀ ರಂಗನಾಥಶರ್ಮರಂತಹ ನುರಿತ-ಸಮರ್ಥ ವಿದ್ವಾಂಸರ ಪರಾಮರ್ಶೆಗೆ ಒಳಪಟ್ಟು ಅದಕ್ಕೆ ವಸ್ತುನಿಷ್ಠ-ವಿಮರ್ಶಾತ್ಮಕ ಮುನ್ನುಡಿ ದೊರೆತಿರುವುದೇ ನನ್ನಂತಹ ಸಾಮಾನ್ಯ ಬರಹಗಾರನಿಗೆ ಆದ ದೊಡ್ಡಲಾಭ !

**"ತುಂಬಿದ ಕೊಡ ತುಳುಕುವುದಿಲ್ಲ"** ಎಂಬ ಮಾತು ಶ್ರೀರಂಗನಾಥಶರ್ಮರಂತಹ ವ್ಯಕ್ತಿಗಳಿಂದಾಗಿಯೇ ಚಾಲತಿಗೆ ಬಂದಿರಬೇಕು. ಅವರಂತಹ ಸರಳ-ಸೌಜನ್ಯಪೂರ್ಣ-ಮೃದು-ಮಧುರ ವ್ಯಕ್ತಿತ್ವದ ವಿದ್ವತ್ಸಂಪನ್ನರು ಈಗಿನ ದಿನಗಳಲ್ಲಿ ತೀರಾ ವಿರಳ. ಅವರನ್ನು **'ಅದ್ವಿತೀಯರು'** ಎಂದು ಹೇಳುವುದು ಭಟ್ಟಂಗಿಯ ಹೊಗಳಿಕೆಯು

ಮಾತೇನೂ ಅಲ್ಲ! ಮೇಲೆ ಕಂಡಂತೆ ನಾಡಿನ **ಇಬ್ಬರು ಹಿರಿಯ–ಗಣ್ಯ–ಸಾಹಿತಿಗಳೇ ಶ್ರೀ ಶರ್ಮರಿಗೆ ಕೊಟ್ಟಿರುವ 'ವಿಶೇಷಣ'** ಅದು.

**ಈ** ವಯಸ್ಸಿನಲ್ಲಿಯೂ ಶ್ರೀರಂಗನಾಥಶರ್ಮರು ಲೇಖನ–ಸಂಶೋಧನೆ–ಪ್ರವಚನಗಳ ಮೂಲಕ ನಾಡಿಗೆ ಅತ್ಯಗತ್ಯವಾದ ಸಂಸ್ಕೃತದ ಉಳಿವು ಕನ್ನಡದ ಅಭಿವೃದ್ಧಿಗಳೆರಡನ್ನೂ **ಸವ್ಯಸಾಚಿಯಂತೆ,** ಆದರೆ ಸದ್ದು–ಗದ್ದಲವಿಲ್ಲದೆ, ನಿರ್ವಹಿಸಿಕೊಂಡು ಹೋಗುತ್ತಿರುವುದು ನಾಡಿನ ಭಾಗ್ಯ. ಈ ಭಾಗ್ಯ ಹೀಗೆಯೇ ಮುನ್ನಡೆಯುವಂತೆ ಅನುಗ್ರಹಿಸಲೆಂದು ಜಗನ್ನಿಯಾಮಕ ಶಕ್ತಿಯನ್ನು ಪ್ರಾರ್ಥಿಸಿ ಈ ಸಂಭ್ರಮದ ಶುಭ ವೇಳೆಯಲ್ಲಿ ವಿದ್ವಾನ್ ರಂಗನಾಥಶರ್ಮರಿಗೆ ಹಾರ್ದಿಕ ಅಭಿವಂದನೆಗಳನ್ನು ಸಮರ್ಪಿಸುತ್ತಿದ್ದೇನೆ.

ಇದು ವಿಜ್ಞಾನ ಯುಗ. ಸ್ವತಂತ್ರ ವಿಚಾರಿಗಳು ನಾವು. ಪ್ರತ್ಯಕ್ಷವಾದದ್ದನ್ನು ಮಾತ್ರ ನಂಬಬಹುದು ; ನಮ್ಮ ಬುದ್ಧಿಗೆ ಸರಿತೋರಿದಂತೆ ಮಾತಾಡುತ್ತೇವೆ. ಅಜ್ಜ ನೆಟ್ಟ ಆ ಧರ್ಮವನ್ನು ಆಶ್ರಯಿಸತಕ್ಕವರಲ್ಲ ನಾವು—ಎನ್ನುತ್ತೇವೆ. ಆದರೆ ಅಜ್ಜ ನೆಟ್ಟದ್ದು ಮಾವಿನ ಮರವಾದರೆ ಹಣ್ಣುಗಳು ಬೇಕೆನ್ನುತ್ತೇವೆ. ದೇಶಾಂತರದ ವಾರ್ತೆಗಳೂ ಇತಿಹಾಸಕಾರರ ವಚನಗಳೂ, ವಿಜ್ಞಾನಿಗಳ ಲೆಕ್ಕಾಚಾರಗಳೂ ವೈದ್ಯರು ಹೇಳುವ ರೋಗ ಕಾರಣಗಳೂ ಪ್ರತ್ಯಕ್ಷವಲ್ಲದಿದ್ದರೂ ನಂಬುತ್ತೇವೆ... ಹಾಗೆಯೇ ಮಹಾತ್ಮರು ಸ್ವಾನುಭವದಿಂದ ಹೇಳಿದ ಪರಮಾರ್ಥ ವಿಷಯವನ್ನು ಮಾತ್ರ ಪ್ರತ್ಯಕ್ಷಯೋಗ್ಯವೆಂದು ನಾವು ನಂಬುವುದಿಲ್ಲ. ಅದಕ್ಕೆ ಹೇಳಿದ ಸಾಧನ ಸಂಪತ್ತುಗಳನ್ನು ಗಳಿಸಿಕೊಂಡು ಪ್ರಮಾಣೀಕರಿಸಲು ಸಾಧ್ಯವೆಂದರೆ ಒಪ್ಪುವುದಿಲ್ಲ. ಇದು ಕಲಿಯುಗದ ಮಹಿಮೆ !

'ಸೂಕ್ತಿ–ವ್ಯಾಪ್ತಿ'ಯಲ್ಲಿ
**ಶ್ರೀ ರಂಗನಾಥ ಶರ್ಮರು**